# PROCEEDINGS OF THE GOVERNMENT OF KARNATAKA

SUB : Approval of investment proposals and extending infrastructure by State High Level Clearance Committee / State Level Single Window Clearance Committee / District Level Single Window Clearance Committee – *allotment of land through KIADB – reg.*

READ: The Karnataka Industries (Facilitation) Act 2002 and Rules 2003.

## PREAMBLE

The Karnataka Industries (Facilitation) Act 2002 & Rules 2003 have since been notified and (i) the State High Level Clearance Committee (SHLCC) for approval of mega industrial projects of more than Rs.50 Cr. investment, (ii) State Level Single Window Clearance Committee (SLSWCC) for approval of large and medium projects and (iii) District Level Single Window Clearance Committee (DLSWCC) have been constituted. These committees have been authorised to examine the projects presented before them and approve the proposal and take appropriate decisions including extension of infrastructure assistance and incentives and concessions.

In respect of Mega projects considered by the SHLCC and large and medium projects considered by the SLSWCC, decisions are taken on allocation of industrial lands in an existing KIADB developed industrial area or for acquisition of lands afresh for a specified project in a specified location as "Single Unit Complex". In the DLSWCC land requirements of SSI units is considered and allotted and the district officers of KIADB are empowered to allot upto two acres based on the decision of DLSWCC and requirements of more than two acres are referred to the KIADB. Bangalore.

It is observed that many a time, land requirements indicated by the entrepreneurs for projects are far in excess of the actual requirements in terms of total built up area, investment proposed in the

venture, etc. and entrepreneurs seek to justify the needs citing various reasons like open space, future expansion needs etc.

The availability of land especially around major urban centres has very limited and acquisition procedure becomes complex. Hence it is felt that there is a need to examine in-depth land requirements of a specific project through its various components, future expansion needs, etc. with a view to judicially use the available land resources to support maximum number of projects and investments and to minimise the hardship to farmers in acquisition for Single Unit Complexes.

Accordingly it is felt desirable to set up "Land Audit Committee" to examine the land requirements of various components of individual industrial project and arrive at a just and minimum requirement of land to be provided through KIADB in an existing industrial area or for the purpose of initiation of fresh acquisition as "Single Unit Complex". Hence the following orders.

**ORDER NO CI 332 SPI 2004, BANGALORE, DATED 29TH AUG. 2005**

In pursuance of the objectives enumerated in the preamble, Government is pleased to constitute a "Land Audit Committee" consisting of the following members:

| | | | |
|---|---|---|---|
| 1. | The Principal Secretary to Govt. Commerce & Industries Dept., | - | Chairman |
| 2. | The Principal Secretary, Urban Development Dept. | - | Member |
| 3. | The Secretary to Govt., Revenue Dept. | - | Member |
| 4. | The CEO & EM, KIADB | – | Member |
| 5. | The Commissioner for Industrial Development and Director of Industries & Commerce | – | Member |
| 6. | The MD, Karnataka Udyog Mitra | – | Member-Secretary |

The above Land Audit Committee shall vet all the applications received by Karnataka Udyog Mitra for consideration or wherein the land requirements are (i) more than two hectares in Bangalore urban and rural districts and (ii) more than five hectares Mysore and Mangalore districts. Recommendations of the Land Audit Committee shall be incorporated in the agenda notes of the SHLCC and SLSWCC for consideration and appropriate decision.

In supersession of all earlier orders / guidelines, and in exercise of the powers under Section-17 of the KIAD Act 1966, KIADB is hereby directed not allot any land to any project directly, but only to projects vetted by Land Audit Committee wherever necessary and thereafter approved by SHLCC, SLSWCC, as the case may be.

By order and in the name of
the Governor of Karnataka

29.8.05

[M.Shivalinga Swamy]
Under Secretary to Govt.[ID]
Commerce & Industries Dept.

To

1. The Accountant General in Karnataka, Bangalore-1
2. The Chief Secretary, Govt. of Karnataka, Vidhana Soudha, Bangalore-1
3. All the ACS / ACS & Development Commissioner
4. The Principal Secretary to Hon'ble Chief Minister
5. All the Principal Secretaries to Govt./ Secretaries to Govt.
6. The Private Secretaries to all Ministers & Ministers of State
7. The Commissioner for Industrial Development and Director of Industries & Commerce, Kanija Bhavan, Bangalore-1
8. The CEO & EM, KIADB, 14/3 Nrupathunga Road, Bangalore-1
9. The MD, Karnataka Udyoga Mitra, Kanija Bhavan, 49 Race Course Road, Bangalore-1
10. All the Deputy Commissioner of Districts
11. All CEOs of Zilla Panchayats.
12. All JDs, DICs
13. Office copy
14. Extra.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯಕವಿರುವ ಜಮೀನನ್ನು ಪರಿಶೀಲಿಸಲು ಜಮೀನು ಪರಿಶೋಧನಾ ಸಮಿತಿ (Land Audit Committee) ಯನ್ನು ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಿಐ 158 ಎಸ್‌ಪಿಐ 2011, ದಿನಾಂಕ: 24.06.2013.

-:O:-

**ಪ್ರಸ್ತಾವನೆ:**

ಕೈಗಾರಿಕೆ ಸ್ಥಾಪನಾ ಪ್ರಸ್ತಾವನೆಗಳು ಅನೇಕ ಸಲ ತಮ್ಮ ಅವಶ್ಯಕತೆಗಿಂತಲೂ ಹೆಚ್ಚಿನ ಜಮೀನನ್ನು ಕೋರುತ್ತಿದ್ದು, ಇದರಿಂದಾಗಿ ಹೆಚ್ಚಿನ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದು ಸಾರ್ವಜನಿಕರಿಂದ ಆಕ್ಷೇಪಣೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWCC) ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನಿನ ಬಗ್ಗೆ ಸಲಹೆ ನೀಡಲು ಜಮೀನು ಪರಿಶೋಧನಾ ಸಮಿತಿ ರಚಿಸುವುದು ಅವಶ್ಯವಿದ್ದ ಕಾರಣ, ದಿನಾಂಕ: 17.06.2013 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಮೀನು ಪರಿಶೋಧನಾ ಸಮಿತಿ ರಚಿಸಬೇಕು ಹಾಗೂ ಎಲ್ಲಾ ಪ್ರಸ್ತಾವನೆಗಳ ಜಮೀನಿನ ಅವಶ್ಯಕತೆ ಬಗ್ಗೆ ಮೊದಲೇ ತಿಳಿಸಬೇಕೆಂದು ಸೂಚಿಸಿದ ಹಿನ್ನೆಲೆಯಲ್ಲಿ, ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (SLSWCC) ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನು ಪರಿಶೀಲಿಸಲು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಯನ್ನು ರಚಿಸಿ ಮೇಲೆ ಓದಲಾದ (1)ರ ಆದೇಶವನ್ನು ಹೊರಡಿಸಲಾಗಿದೆ.

ಪ್ರಸ್ತುತ, ಜಮೀನು ಪರಿಶೀಲನಾ ಸಮಿತಿ (Land Audit Committee) ಯು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಲು ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಸಮಿತಿಯನ್ನು ಪುನರ್ ರಚಿಸಬೇಕೆಂದು ನಿರ್ಧರಿಸಲಾಗಿರುತ್ತದೆ.

ಅದರಂತೆ ಈ ಮುಂದಿನ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 158 ಎಸ್‌ಪಿಐ 2011, ಬೆಂಗಳೂರು, ದಿನಾಂಕ: 17.05.2014**

ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (SLSWCC) ಮುಂದೆ ಬರುವ ಎಲ್ಲಾ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನನ್ನು ಪರಿಶೀಲಿಸಲು ಹಾಗೂ ಮಂಜೂರು ಮಾಡಲು ಶಿಫಾರಸ್ಸು ಮಾಡುವುದಕ್ಕಾಗಿ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಯನ್ನು ಈ ಮುಂದಿನಂತೆ ಪುನರ್ ರಚಿಸಲಾಗಿದೆ.

| | | | |
|---|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | : | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | : | ಸದಸ್ಯರು |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ | : | ಸದಸ್ಯರು |
| 4. | ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | : | ಸದಸ್ಯ ಕಾರ್ಯದರ್ಶಿ |
| 5. | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಕೆ.ಐ.ಎ.ಡಿ.ಬಿ. | : | ಸದಸ್ಯರು |
| 6. | ಮುಖ್ಯ ಸಲಹೆಗಾರರು, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್) | : | ಸದಸ್ಯರು |
| 7. | ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | : | ಸದಸ್ಯರು |
| 8. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ | : | ಸದಸ್ಯರು |
| 9. | ರಾಜ್ಯ ಪರಿಸರ ಮಾಲಿನ್ಯ ಮಂಡಳ ಸದಸ್ಯ ಕಾರ್ಯದರ್ಶಿ | : | ಸದಸ್ಯರು |

ಜಮೀನು ಪರಿಶೀಲನಾ ಸಮಿತಿ (Land Audit Committee) ಯು ಜಮೀನಿನ ಅವಶ್ಯಕತೆಯನ್ನು ಪರಿಗಣಿಸುವಾಗ:

a) ಬಂಡವಾಳ ಹೂಡಿಕೆಯ ಪ್ರವರ್ತಕರು ಕೇಳಿದ ಜಮೀನಿನ ಪ್ರಸ್ತಾಪಿತ ಉಪಯೋಗವನ್ನು ಪರಿಶೀಲಿಸಬೇಕು ಹಾಗೂ ಕೇಳಿರುವ ಜಮೀನು ಸ್ವಾಧೀನ ಆಗಿದೆಯೇ ಅಥವಾ ಇಲ್ಲವೇ ಮತ್ತು ಕೆಐಎಡಿಬಿ ಯಿಂದ ಜಮೀನು ಹಂಚಿಕೆ ಮಾಡುವ ಹಂತದಲ್ಲಿ ಇದೆಯೇ ಎಂಬುದನ್ನೂ ಕೂಡ ಪರಿಶೀಲಿಸಬೇಕು. ಸದರಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್, ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳು ಇದೆಯೇ ಎಂಬುದನ್ನು ಪರಿಶೀಲಿಸಬೇಕು.

b) ಬಂಡವಾಳ ಹೂಡಿಕೆಯ ಪ್ರವರ್ತಕರು ಕೇಳುತ್ತಿರುವ ಜಮೀನಿನ ಸದ್ಯದ ಸ್ಥಿತಿಗತಿಗಳನ್ನು ಅಂದರೆ ಕೈಗಾರಿಕಾ ಪ್ರದೇಶ / ಕೃಷಿ ಭೂಮಿಯೇ / ಬಂಜರು ಭೂಮಿಯೇ / ಸರ್ಕಾರದ ಜಮೀನೇ / ಪರಿವರ್ತಿತ ಜಮೀನೇ ಅಥವಾ ನಿಗದಿತ ಹಸಿರು ವಲಯವೇ ಎಂಬುದನ್ನು ವರದಿಯಲ್ಲಿ ಹೆಸರಿಸಬೇಕು.

c) ಕೈಗಾರಿಕಾ ವಿಸ್ತರಣಾ ಕಾರ್ಯಕ್ರಮಕ್ಕೆ ಬೇಕಾದ ಜಮೀನನ್ನೂ ಕೂಡಾ ಪರಿಗಣನೆಗೆ ತೆಗೆದುಕೊಳ್ಳಬೇಕು.

d) ಇದಲ್ಲದೇ, ಏಕಘಟಕ ಸಂಕೀರ್ಣಕ್ಕೆ ಪ್ರಸ್ತಾಪಿಸಿದ ಜಮೀನು ನೀರಾವರಿಯ ಜಮೀನೇ ಅಥವಾ ಕೃಷಿ ಯೋಗ್ಯದ ಜಮೀನೇ ಎಂಬುದನ್ನೂ ಕೂಡಾ ಪರಿಶೀಲಿಸಬೇಕು.

೮) ಭೂಮಿ ಹಂಚಿಕೆ ಕುರಿತಂತೆ ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶ / ಮಾರ್ಗಸೂಚಿಗಳನ್ನು ರದ್ದುಪಡಿಸಿ, ಕೆಐಎಡಿ ಕಾಯ್ದೆ 1966 ರ ಕಲಂ 17 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಯಾವುದೇ ಯೋಜನೆಗಳಿಗೆ ನೇರವಾಗಿ ಜಮೀನು ಹಂಚಿಕೆ ಮಾಡಬಾರದೆಂದು ನಿರ್ದೇಶಿಸಲಾಗಿದೆ. ಜಮೀನು ಪರಿಶೋಧನಾ ಸಮಿತಿಯು ಪರಿಶೋಧನೆಯ ಅಗತ್ಯ ಇದ್ದಲ್ಲಿ ಅದರ ಅಭಿಪ್ರಾಯದೊಂದಿಗೆ ಎಸ್‌ಹೆಚ್‌ಎಲ್‌ಸಿಸಿ ಮತ್ತು ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಸಮಿತಿಗಳಲ್ಲಿ ಅನುಮೋದನೆಗೊಂಡ ಯೋಜನೆಗಳಿಗೆ ಮಾತ್ರ ಹಂಚಿಕೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ರತ್ನ ಪ್ರಭಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ – ಮುಂದಿನ ಗೆಜೆಟ್‌ನಲ್ಲಿ ಪ್ರಕಟಿಸಿ, 100 ಪ್ರತಿಗಳನ್ನು ಈ ಶಾಖೆಗೆ ಒದಗಿಸಲು ಕೋರಿದೆ.
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು–01.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01.
6. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು–01.
7. ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಹೆಬ್ಬಾಳ, ಬೆಂಗಳೂರು.
8. ಮುಖ್ಯ ಸಲಹೆಗಾರರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು–01.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
10. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು–01.
11. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು–01.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.